ದಲಾಯಿ ಲಾಮಾರನ್ನು ಅವಲೋಕಿತೇಶ್ವರನ ಅವತಾರವೆಂದು ನಂಬುವ ಪದ್ಧತಿ ಟಿಬೆಟಿನಲ್ಲಿ ಹದಿನಾಲ್ಕನೇ ಶತಮಾನದಲ್ಲಿ ಆರಂಭಗೊಂಡಿತು. ಐದನೇ ದಲಾಯಿ ಲಾಮಾ ನಿಧನನಾಗಿ ಹದಿನೈದು ವರ್ಷಗಳ ನಂತರ ಟಿಬೆಟಿನ ಏಕೀಕರಣಕ್ಕೆ ಹೋರಾಡಿದ್ದ ಸೋನಮ್ ಚೋಪೆಲ್ ಎಂಬ ರೀಜೆಂಟ್(ರಾಜಪ್ರತಿನಿಧಿ) ಉತ್ತರಾಧಿಕಾರಿಯೆಂದು ತ್ಸಂಗ್‌ಯಾಂಗ್‌ನನ್ನು ಧರ್ಮಗುರು ಸ್ಥಾನಕ್ಕೆ 1697ರಲ್ಲಿ ತವಾಂಗಿನಿಂದ ಕರೆ ತಂದನು. ಆಗಿನ್ನು ತ್ಸಂಗ್‌ಯಾಂಗ್‌ಗೆ ಹದಿನಾಲ್ಕರ ಹರೆಯ.

ಬಿಲ್ವಿದ್ಯೆ ಮತ್ತು ವಾಸ್ತುಶಿಲ್ಪಗಳಲ್ಲಿ ಪರಿಣತಿಯಿದ್ದ ತ್ಸಂಗ್‌ಯಾಂಗ್‌ಗೆ ತಾನೊಬ್ಬ ಪರಮೋಚ್ಚ ಧರ್ಮಗುರು ಎಂದು ಕರೆಸಿಕೊಳ್ಳುವ ಅಭಿಲಾಶೆ ಸ್ವಲ್ಪವೂ ಇರಲಿಲ್ಲ. ಅವನಲ್ಲಿ ಸಂತ ಜೀವನದ ಬಗ್ಗೆ ಅಸ್ಪಷ್ಟ ಜಿಗುಪ್ಸೆ ಅದಾಗಲೇ ಮೊಳಕೆಯೊಡೆದಿತ್ತು. ಪ್ರತಿಕ್ಷಣ, ಪ್ರತಿದಿನ ಅವನು ಅರೆಮನಸ್ಸಿನಿಂದಲೇ ಧರ್ಮಗುರುವಿನ ಹೊಣೆಯನ್ನು ನಿರ್ವಹಿಸಿದ. ಆದರೆ ವಯಸ್ಸು ಬೇಡಿದ್ದನ್ನು ಹೇಗಾದರೂ ಪಡೆಯುತ್ತ ಹೋದ. ಲಾಮಾ ಜೀವನ ಅವನಿಗೆ ವೈರುಧ್ಯವಾಗಿದ್ದರೆ ಅವನ ಕಾಮುಕತೆ ಅನ್ಯರಿಗೆ ವೈರುಧ್ಯವಾಗಿತ್ತು. ಸಾಲದ್ದಕ್ಕೆ ಅವನೊಳಗೆ ಕವಿಮನಸ್ಸು ಮಿಡಿಯುತ್ತಿತ್ತು. ಅದು ಸ್ವಚ್ಛಂದತೆಯನ್ನು ಬೇಡುತ್ತದೆ. ಆಕಾಶದಂತಹ ಸ್ವಚ್ಛಂದತೆ ಬೇಕು ಅದಕ್ಕೆ. ಮತಧರ್ಮವೆನ್ನುವುದು ರೂಢಮೂಲ ನಂಬಿಕೆ ಮತ್ತು ಕ್ರಿಯಾವಿಧಿಗಳ ಸೆರೆಮನೆ. ಸೆರೆಮನೆಗೂ ಸ್ವಚ್ಛಂದತೆಗೂ ಆಗಿ ಬರುವುದಿಲ್ಲ. ಸಂಚರಿಸಲು ವಿಹಾರ ಒದಗಿಸಿದ್ದ ಕುದುರೆಯನ್ನು, ರಾಜಪ್ರತಿನಿಧಿ ನೀಡಿದ್ದ ವಿಶೇಷ ಪಲ್ಲಕ್ಕಿಯನ್ನು ನಿರಾಕರಿಸಿ ಅವನು ರಾತ್ರಿ ತನಗಿಷ್ಟ ಬಂದಂತೆ ಅಂಡಲೆಯುತ್ತಿದ್ದ. ಬಯಸಿ ಬಂದ ಹೆಣ್ಣುಗಳ ಜತೆ ಮಲಗಿದ. ಕೆಲವೊಮ್ಮೆ ತಾನೇ ಸೂಳೆಯರ ಮನೆ ಬಾಗಿಲು ತಟ್ಟಿದ. ಅವರೊಂದಿಗೆ ಪಾನಗೃಹಗಳಲ್ಲಿ ಸುರೆ ಹೀರಿದ. ಅವರಿಗಾಗಿ ಪ್ರೇಮಗೀತೆಗಳನ್ನು ರಚಿಸಿ ಹಾಡಿದ. ಕಾಮೋತ್ಕಟತೆಯಲ್ಲಿ ಸಮಾಧಿ ಸ್ಥಿತಿಗೆ ತಲುಪಲು ತಹತಹಿಸುತ್ತ ಸನ್ಯಾಸಾಶ್ರಮದ ಕಟ್ಟುಪಾಡುಗಳನ್ನೇ ಸಮಾಧಿ ಮಾಡಿಬಿಟ್ಟ. ದಲಾಯಿ ಲಾಮಾಗಳ ಅವತಾರದ ಪರಂಪರೆಯಲ್ಲೇ ಏಕೈಕ ಮಹಾ ಪಥಭ್ರಷ್ಟ ಧರ್ಮಗುರು ಎಂಬ ವಿಲಕ್ಷಣ ಖ್ಯಾತಿ ಪಡೆದ.

ಒಮ್ಮೊಮ್ಮೆ ವಿಹಾರದಿಂದ ತಪ್ಪಿಸಿಕೊಂಡು ಹೋಗಿಬಿಡಬೇಕು ಎಂದು ತ್ಸಂಗ್‌ಯಾಂಗ್‌ಗೆ ಅನಿಸುತ್ತಿತ್ತು. ತಾನಿರುವ ಲ್ಹಾಸಾಕ್ಕೆ ತನ್ನ ಹುಟ್ಟೂರು ಯಾವ ದಿಕ್ಕಿನಲ್ಲಿದೆ ಎಂದೇ ಅವನಿಗೆ ತಿಳಿದಿರಲಿಲ್ಲ. ಸಾವಿರಾರು ಮೈಲುಗಳವರೆಗೆ ಹಬ್ಬಿರುವ ಹಿಮಾಲಯದ ದುರ್ಗಮ ಪರ್ವತಗಳು, ದುಸ್ತರ ಕಣಿವೆಗಳನ್ನು ಹಾದು ಪಲಾಯನ ಮಾಡುವುದು ಸಾಧ್ಯವಿರಲಿಲ್ಲ. ದಿನಗಟ್ಟಲೆ ನೂರಾರು ಮೈಲಿ ಕ್ರಮಿಸಿದರೂ ಒಂದು ನರಪಿಳ್ಳೆಯೂ ಕಾಣಸಿಗದ ಪ್ರದೇಶದಲ್ಲಿ ಪಲಾಯನ ಆತ್ಮಹತ್ಯೆಗೆ ಸಮನಾಗಿತ್ತು. ಅಸಹಾಯಕತೆ ದಿನದಿನವೂ ಹೆಪ್ಪುಗಟ್ಟುತಿತ್ತು. ಒಂದು ದಿನ ಆ ಅಸಹಾಯಕತೆಯನ್ನು ಮೀರುವ ಸಲುವಾಗಿ ಚಿಮ್ಮಿದ ಕಾಮದ ಕಾರಂಜಿ ಅವನನ್ನು ಹೊಸ ದಿಕ್ಕಿಗೆ ಎಸೆಯಿತು. ತನ್ನನ್ನು ಕಟ್ಟಿಹಾಕಿದ್ದಲ್ಲೇ ಅವನು ಬಂಡೆದ್ದ.

ತ್ಸಂಗ್‌ಯಾಂಗ್ ಹೊಣೆಗಾರಿಕೆಗಳಿಂದ ವಿಮುಖನಾದಂತೆ ಪ್ರತಿರೋಧಗಳೆದುರಾದವು. ಅನೂಚಾನ ಸಂಪ್ರದಾಯಗಳು ಹಳಿ ತಪ್ಪಿದವು. ವಿಹಾರದ ಆದಾಯ ಕುಸಿಯಿತು. ನೂರಾರು ಭಿಕ್ಕುಗಳ ಧಾರ್ಮಿಕ ತರಬೇತಿಗೆ ಅವನ ಲೋಲುಪತೆ ಅಪಮಾದರಿಯಾಯಿತು. ಆಳರಸರ ಜತೆ ವೈಮನಸ್ಸು ಮೊಳೆಯಿತು. ಸಾಮಾನ್ಯ ಟಿಬೆಟನ್ನರು ಪ್ರವಚನ ನೀಡುವ ಬದಲು ಪ್ರಣಯಭಿಕ್ಷೆ ಬೇಡುವವನನ್ನು ಹೇಗೆ ಸ್ವೀಕರಿಸುವುದು ಎಂಬ ಗಲಿಬಿಲಿಗೆ ಬಿದ್ದರು. ನಿಜಕ್ಕೂ ಇವನು ಅವತಾರ ಪುರುಷನೇ, ಆಯ್ಕೆಯಲ್ಲಿ ಎಲ್ಲೋ ಏನೋ ಎಡವಟ್ಟಾಗಿರಬೇಕು ಎಂದು ಶಂಕಿಸಿದರು. ಸನ್ಯಾಸಿಯಾದವನು ಕಾಮಿಸಬಾರದು, ಕಾಮಿಸಿದವನು ಸನ್ಯಾಸಿಯಾಗಿ ಉಳಿಯಬಾರದು. ಆದರೆ